ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಅಭಿಯಂತರರ ಕಛೇರಿ, ದಾಸರಹಳ್ಳಿ ವಲಯ,
ಎಂ.ಇ.ಐ.ಬಡಾವಣೆ, ಬಾಗಲಗುಂಟೆ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು -560073.

ನಂ:–ಬಿಬಿಎಂಪಿ/ಮು.ಅ/ದಾ.ವ/ಪಿಆರ್/ /18–19 ದಿನಾಂಕ: 06-02-2019

ಸ್ಥಳ ಪರಿಶೀಲನಾ ವರದಿ

ವಿಷಯ: ದಾಸರಹಳ್ಳಿ ವಲಯ ವ್ಯಾಪ್ತಿಯ ವಾರ್ಡ್ ನಂ 13ರ "Construction of Dialysis center in ward No.13" ಕಾಮಗಾರಿಗೆ ದಿನಾಂಕ:06–02–2019 ರಂದು ಶ್ರೀ.ಆರ್.ಮಂಜುನಾಥ ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ, ಪಾಲಿಕೆ ಸದಸ್ಯರಾದ ಶ್ರೀ.ಲೋಕೇಶ್ ಹಾಗೂ ಸಂಬಂಧಪಟ್ಟ ಅಭಿಯಂತರೊಡನೆ ಸ್ಥಳ ಪರಿಶೀಲನೆ ನಡೆಸಿರುವ ಬಗ್ಗೆ.

ಹಾಜರಿದ್ದ ಅಧಿಕಾರಿಗಳು:

- **ಶ್ರೀ.ಲೋಕೇಶ್.ಎನ್ : ಪಾಲಿಕೆ ಸದಸ್ಯರು, ವಾರ್ಡ್ ನಂ.13**
- **ಶ್ರೀ.ಕೆ.ಮರುಳಸಿದ್ದಪ್ಪ : ಕಾರ್ಯಪಾಲಕ ಅಭಿಯಂತರರು (ಯೋಜನೆ)**
- **ಶ್ರೀ.ಹೆಚ್.ಕುಮಾರಪ್ಪ : ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ)**
- **ಶ್ರೀ.ಬಿ.ಎಸ್.ಸಿದ್ದರಾಜೇಗೌಡ : ಸಹಾಯಕ ಅಭಿಯಂತರರು (ಯೋಜನೆ)**
- **ಶ್ರೀ.ವಿನಯ್ ಕುಮಾರ್ (Newzen Consultants Bangalore): ಯೋಜನಾ ಸಮಾಲೋಚಕರು**
- **ಶ್ರೀ.ಕೆ.ಆರ್.ಗೋವಿಂದರಾಜು : ಗುತ್ತಿಗೆದಾರರು.**

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:–06–02–2019ರಂದು ಮಲ್ಲಸಂದ್ರ ವಾರ್ಡ್ ನಂ.13ರ ವ್ಯಾಪ್ತಿಯಲ್ಲಿ ಕೈಗೊಂಡಿರುವ "Construction of Dialysis center in ward No.13" ಕಾಮಗಾರಿಯನ್ನು ಶ್ರೀ.ಆರ್.ಮಂಜುನಾಥ ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ, ಪಾಲಿಕೆ ಸದಸ್ಯರಾದ ಶ್ರೀ.ಲೋಕೇಶ್, ವಾರ್ಡ್ ನಂ.13 ಹಾಗೂ ಶ್ರೀ.ನರಸಿಂಹನಾಯಕ್, ವಾರ್ಡ್ ನಂ.14 ಹಾಗೂ ಸಂಬಂಧಪಟ್ಟ ಅಭಿಯಂತರೊಡನೆ ಸ್ಥಳ ಪರಿಶೀಲನೆ ನಡೆಸಲಾಯಿತು. ಇದೇ ಸಂಧರ್ಭದಲ್ಲಿ ಸದರಿ ಡಯಾಲಿಸಿಸ್ ಸೆಂಟರ್ ನಿರ್ಮಾಣದ ಜಾಗವು ಪೈಪ್‌ಲೈನ್ ಮುಖ್ಯ ರಸ್ತೆಗೆ ಹೊಂದಿಕೊಂಡಿದ್ದು, ಪಕ್ಕದಲ್ಲಿ ಇಂದಿರಾ ಕ್ಯಾಂಟೀನ್ ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಬಸ್ ನಿಲ್ದಾಣ ಇದ್ದು, ಸಾರ್ವಜನಿಕರಿಗೆ ಮೂಲಭೂತಸೌಕರ್ಯ ಒದಗಿಸಲು ಡಯಾಲಿಸಿಸ್ ಕೇಂದ್ರ ಹಾಗೂ ಇನ್ನಿತರೆ ಕಛೇರಿಗಳನ್ನು ನಿರ್ಮಿಸಲು ಅನುವಾಗುವಂತೆ ಕಟ್ಟಡದ ಪಾಯವನ್ನು 4–5 ಅಂತಸ್ತುಗಳಿಗೆ ವಿನ್ಯಾಸಗೊಳಿಸಿ ನಿರ್ಮಿಸುವಂತೆ ಹಾಗೂ ಇದಕ್ಕೆ ತಗಲುವ ಅನುದಾನವನ್ನು ಒದಗಿಸುವುದಾಗಿ ತಿಳಿಸಿರುತ್ತಾರೆ.

ಸ್ಥಳ ಪರಿಶೀಲನೆ ಮಾಡಿ ಸದರಿ ಕಾಮಗಾರಿಯನ್ನು ಶ್ರೀ.ಆರ್.ಮಂಜುನಾಥ ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ, ಪಾಲಿಕೆ ಸದಸ್ಯರಾದ ಶ್ರೀ.ಲೋಕೇಶ್, ವಾರ್ಡ್ ನಂ.13 ಹಾಗೂ ಶ್ರೀ.ನರಸಿಂಹನಾಯಕ್, ವಾರ್ಡ್ ನಂ.14 ರವರುಗಳು ಕೋರಿರುವಂತೆ ಐದು ಮಹಡಿಗಳ ಕಟ್ಟಡಕ್ಕೆ ವಿನ್ಯಾಸವನ್ನು ಆಳವಡಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸುವಂತೆ ಹಾಗೂ ಈ ಸಂಬಂಧ ವರ್ಕ್‌ಸ್ಲಿಪ್ ಮತ್ತು ಇಐಆರ್‌ಎಲ್ ತಯಾರಿಸಿ ಸಲ್ಲಿಸುವಂತೆ ಯೋಜನಾ ಸಮಾಲೋಚಕರಿಗೆ ಸೂಚಿಸಿ ಅನುಮೋದನೆಗೆ ಸಲ್ಲಿಸಲು ಯೋಜನಾ ವಿಭಾಗದ ಅಭಿಯಂತರರುಗಳಿಗೆ ಸೂಚಿಸಲಾಯಿತು.

ಮುಖ್ಯ ಅಭಿಯಂತರರು
ದಾಸರಹಳ್ಳಿ ವಲಯ.